ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ ನ್ಯಾಯಾಲಯಃ ಕೊಪ್ಪ

ಸಿಸಿ.ನಂ. ***98/2023***

ಸಾಕ್ಷಿಯ ಹೆಸರುಃ ಶ್ರೀಮತಿ ಜ್ಯೋತಿ ಎನ್. ಎ. ಚಾಸಾಃ 5

ಗಂಡನ ಹೆಸರುಃ ಅಶೋಕ್ ಪ್ರಾಸಾಃ 6

ವಯಸ್ಸುಃ 47 ವರ್ಷ

ಉದ್ಯೋಗಃ ಪಿ ಎಸ್ ಐ., ಎನ್ ಆರ್ ಪುರ, ಪೋಲಿಸ್ ಠಾಣೆ .

ವಾಸಃ ಎನ್ ಆರ್ ಪುರ.

ದಿನಾಂಕಃ 07-03-2026 ರಂದು ಪ್ರಮಾಣವಚನ ಬೋಧಿಸಲಾಯಿತು.

ಃಃ ಮುಖ್ಯ ವಿಚಾರಣೆಃಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃಃ

ನಾನು ಜಯಪುರ ಪೋಲೀಸ್ ಠಾಣೆಯಲ್ಲಿ 2021 ರಿಂದ 2022 ರವರೆಗೂ ಪಿ ಎಸ್ ಐ., ಯಾಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

ದಿನಾಂಕಃ23/09/2022 ರಂದು ನಾನು ಠಾಣೆಯಲ್ಲಿರುವಾಗ ರಾತ್ರಿ 8-35 ಗಂಟೆ ಸಮಯದಲ್ಲಿ ಚಾಸಾ1 ರವರು ನನಗೆ ಫೋನ್ ಮಾಡಿ ಜಯಪುರದಲ್ಲಿರುವ ಡಿಲೈಟ್ ಪುಲ್ ಹೋಮ್ ಸ್ಟೇಯಲ್ಲಿ ಅಕ್ರಮವಾಗಿ ಜೂಜಾಟ ಆಡುತ್ತಿದ್ದಾರೆ ಎಂದು ಮಾಹಿತಿ ತಿಳಿಸಿದ್ದು ನನಗೆ ಜಯಪುರ ಬಸ್ ನಿಲ್ದಾಣಕ್ಕೆ ಸಿಬ್ಬಂದಿಗಳನ್ನು ಕರೆದುಕೊಂಡು ಬರುವಂತೆ ತಿಳಿಸಿದ್ದು ಅದಂರತೆ ನಾನು ಚಾಸಾ 10 ರವರನ್ನು ಕರೆದುಕೊಂಡು 8-45 ಕ್ಕೆ ಹೋದಾಗ ಅಲ್ಲಿ ಚಾಸಾ 4 , 6 ರಿಂದ 8 ರವರು ಹಾಜರಿದ್ದು ನಂತರ ಎ ಎಸ್ ಪಿ., ಯವರು ಸ್ಥಳಕ್ಕೆ ಬಂದು ನಡೆದುಕೊಂಡು ಹೋಗುತ್ತಿದ್ದ ಪಂಚಾಯತುದಾರರಾದ ಚಾಸಾ 2 ಮತ್ತು 3 ರವರಿಗೆ ದಾಳಿಯ ವಿಚಾರ ತಿಳಿಸಿ ಪಂಚರಾಗಿ ಸಹಕರಿಸುವಂತೆ ಕೋರಿ ನೋಟಿಸ್ ಜಾರಿ ಮಾಡಿದ್ದು ನಂತರ ಪಂಚರೊಂದಿಗೆ ಇಲಾಖಾ ವಾಹನ ಹಾಗೂ ಖಾಸಗಿ ವಾಹನಗಳಲ್ಲಿ ಡಿಲೈಟ್ ಪುಲ್ ಹೋಮ್ ಸ್ಟೆ ಬಳಿ ಹೋಗಿದ್ದು ಅಲ್ಲಿ ಹೊರಗೆ ವಾಹನಗಳು

ನಿಂತಿದ್ದು ಅವುಗಳನ್ನು ಗಮನಿಸಿ ಮುಂದೆ ಹೋಗಿದ್ದು, ಡಿಲೈಟ್ ಪುಲ್ ಹೋಮ್ ಸ್ಟೇ ಕೆಳಅಂತಸ್ತಿನಲ್ಲಿ ಕೊಠಡಿಯಲ್ಲಿ ಒಳಗೆ ಹೊರಗೆ ಎಂದು ಇಸ್ಪೀಟ್ ಆಡುತ್ತಿದ್ದನ್ನು ಗಮನಿಸಿ, ಚಾಸಾ 1 ರವರು ನಮ್ಮನ್ನು ಕರೆದುಕೊಂಡು ಅಲ್ಲಿ ಕೊಠಡಿ ಸಂಖ್ಯೆ 1 ಕ್ಕೆ ಹೋದಾಗ 3 ಟೇಬಲ್ ಅನ್ನು ಒಂದಕ್ಕೆ ಒಂದು ಜೋಡಿಸಿಕೊಂಡು ಬೆಡ್ ಶೀಟ್ ಗಳನ್ನು ಹಾಸಿಕೊಂಡು ಅದರ ಮೇಲೆ ಇಸ್ಪೀಟ್ ಎಲೆ ಆಡುತ್ತಿದ್ದು, ಹಣವನ್ನು ಇಟ್ಟು ಜೂಜಾಟ ಆಡುತ್ತಿದ್ದುದು ಕಂಡುಬಂತು. ಇಸ್ಪೀಟ್ ಹಿಡಿದಿದ್ದವರ ಹೆಸರು ಕೇಳಿದಾಗ ರಾಜು ಬಿನ್ ತಮ್ಮಯ್ಯ ಎಂದಿದ್ದು ಸದರಿ ಜೂಜಾಟ ಆಡಲು ಸರಕಾರದಿಂದ ಯಾವುದೆ ಪರವಾನಿಗೆ ಇರುವುದಿಲ್ಲ ಎಂದಿರುತ್ತಾರೆ. ಉಳಿದವರ ಹೆಸರು ಕೇಳಲಾಗಿ ರಾಜಶೇಖರ , ಶ್ರೀಧರ , ಶ್ರೀನಾಥ , ರವಿಕುಮಾರ , ನಾಗರಾಜ , ಸಂದೀಪ, ಬಿಪಿನ್ , ತೇಜಸ್ ಹಾಗೂ ಇತರರು ಒಟ್ಟಾರೆ 35 ಜನ ಇದ್ದರು. ಟೇಬಲ್ ಮೇಲಿದ್ದ ಹಣವನ್ನು ಎಣಿಸಿದಾಗ ರೂ.5,54,140/- ಗಳು ಇದ್ದುದು ಕಂಡುಬಂದಿತು. ಹಾಗೂ ಚೇರುಗಳನ್ನು ಎಣಿಸಲಾಗಿ ಒಟ್ಟು 34 ಚೇರುಗಳು ಇದ್ದು, ಆಟಕ್ಕೆ ಪಣವಾಗಿ ಇಟ್ಟಿದ್ದ 39 ಮೊಬೈಲ್ ಇರುವುದು ಕಂಡು ಬಂತು. ಟೇಬಲ್ ಮೇಲೆ ಒಂದು ಬಾಕ್ಸ್ ಇದ್ದು ಅದನ್ನು ವಶಕ್ಕೆ ಪಡೆಯಲಾಯಿತು. ಆಟಕ್ಕೆ ಬಳಸಿದ 3 ಟೇಬಲ್ ಹಾಗೂ ಹಾಸಿದ್ದ ಬೆಡ್ ಶೀಟ್ ಗಳನ್ನು ವಶಕ್ಕೆ ಪಡೆಯಲಾಯಿತು. ಆಟಕ್ಕೆ ಪಣವಾಗಿಟ್ಟಿದ್ದ 4 ಕಾರುಗಳನ್ನು ವಶಕ್ಕೆ ಪಡೆಯಲಾಯಿತು. ಸದರಿ ಹಣವನ್ನು ಅಲ್ಲೇ ಇದ್ದ ಪ್ಲಾಸ್ಟಿಕ್ ಬಾಕ್ಸಿನಲ್ಲಿ ಹಾಕಿ ಬಿಳಿಬಟ್ಟೆಯಲ್ಲಿ ಸುತ್ತಿ ಚಾಸಾ 1 ಹಾಗೂ 3 ರವರ ಸಹಿ ಮಾಡಿದ ಚೀಟಿ ಅಂಟಿಸಲಾಯಿತು. ಸದರಿ ಮಹಜರನ್ನು ರಾತ್ರಿ 9-30 ರಿಂದ 11-30 ರವರೆಗೂ ಬರೆದು ಸದರಿ ಸ್ಥಳದ ಪೋಟೊ ತೆಗೆದಿರುತ್ತಾರೆ. ಸದರಿ ಮಹಜರಿಗೆ ನಾನು ಸಹಿ ಮಾಡಿರುತ್ತೇನೆ.

ನಿಪಿ.1 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.1(ಇ) ಎಂದೂ ಗುರುತಿಸಲಾಯಿತು.

ನಿಪಿ.3 ಮತ್ತು 4ರ ಫೋಟೋಗಳನ್ನು ನೋಡಿ ಸಾಕ್ಷಿ ಗುರುತಿಸುತ್ತಾರೆ. ಸದರಿ ಪ್ರಕರಣದಲ್ಲಿ ನಾನು ಮೇಲಾಧಿಕಾರಿಗಳ ಮುಂದೆ ನನ್ನ ಹೇಳಿಕೆ ನೀಡಿರುತ್ತೇನೆ.

ಈ ದಿನ ನ್ಯಾಯಾಲಯದ ಮುಂದಿರುವ 1, 16, 24, 29, 32, 33ನೇ ಆರೋಪಿತರನ್ನು ನೋಡಿ ಸಾಕ್ಷಿ ಗುರುತಿಸುತ್ತಾರೆ.

ಮುದ್ದೆ ಮಾಲು 1ರಿಂದ 3ಅನ್ನು ನೋಡಿ ಸಾಕ್ಷಿ ಗುರುತಿಸುತ್ತಾರೆ.

ಪಾಟೀ ಸವಾಲುಃ ಆರೋಪಿಗಳ ಪರಃ ಶ್ರೀ ಹೆಚ್ ಎಸ್ ಎ., ವಕೀಲರಿಂದಃ

ಡಿಲೈಟ್ ಫುಲ್ ಹೋಮ್ ಸ್ಟೇ ಎಂಬ ಸ್ಥಳ ನಾನು ಕಾರ್ಯ ನಿರ್ವಹಿಸುತ್ತಿದ್ದ ಜಯಪುರ ಠಾಣಾ ವ್ಯಾಪ್ತಿಗೆ ಬರುತ್ತದೆ ಎಂದರೆ ಸರಿ. ಕೃತ್ಯಕ್ಕೂ ಪೂರ್ವದಲ್ಲಿ ನಾನು ಸದರಿ ಸ್ಥಳಕ್ಕೆ ಬೇಟಿ ನೀಡಿರುವುದಿಲ್ಲ. ಸದರಿ ಡಿಲೈಟ್ ಫುಲ್ ಹೋಮ್ ಸ್ಟೇ ನಮ್ಮ ಠಾಣೆಯಿಂದ ಸುಮಾರು 1 ಕಿಮೀ ಅಂತರದಲ್ಲಿ ಇರುತ್ತದೆ.

ಚಾಸಾ 1 ರವರು ನಮ್ಮನ್ನು ಜಯಪುರ ಬಸ್ ನಿಲ್ದಾಣಕ್ಕೆ ಬರುವಂತೆ ಸೂಚಿಸಿದ್ದರು. ಕೃತ್ಯ ನಡೆದಿದೆ ಎನ್ನಲಾದ ಸ್ಥಳಕ್ಕೆ ಬರುವಂತೆ ಸೂಚಿಸಿರುತ್ತಾರೆ. ಜಯಪುರ ಬಸ್ ನಿಲ್ದಾಣವು ನಮ್ಮ ಠಾಣೆಯಿಂದ ಅರ್ಧ ಕಿಮಿ ಅಂತರದಲ್ಲಿರುತ್ತದೆ. ಚಾಸಾ 4 ರವರು ನಾವು ಕೃತ್ಯ ನಡೆದಿದೆ ಎನ್ನಲಾದ ಸ್ಥಳಕ್ಕೆ ಹೋಗುವ ಪೂರ್ವದಲ್ಲೇ ಬಂದಿದ್ದರು.

ಶೃಂಗೇರಿಯಿಂದ ಜಯಪುರಕ್ಕೆ ಸುಮಾರು 25 ಕಿಮೀ ಅಂತರ ಇರುತ್ತದೆ. ಚಾಸಾ 1 ರವರು ಚಾಸಾ 4 ರವರಿಗೆ ಎಷ್ಟು ಹೊತ್ತಿಗೆ ಮಾಹಿತಿ ನೀಡಿದ್ದರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಚಾಸಾ 1 ರವರು ನನಗೆ 8-35 ಕ್ಕೆ ಸದರಿ ಮಾಹಿತಿ ತಿಳಿಸಿದ್ದರು.

ಕೊಪ್ಪದಿಂದ ಜಯಪುರಕ್ಕೆ ಸುಮಾರು 22 ಕಿಮಿ ಅಂತರ ಇರುತ್ತದೆ. ಸಾಮಾನ್ಯವಾಗಿ ಜಯಪರದಿಂದ ಕೊಪ್ಪಕ್ಕೆ ಬರಬೇಕಾದರೆ ಸುಮಾರು 45 ನಿಮಿಷ ಬೇಕಾಗುತ್ತದೆ ಎಂದರೆ ಸಾಕ್ಷಿಯ 30 ನಿಮಿಷ ಬೇಕಾಗುತ್ತದೆ ಎನ್ನುತ್ತಾರೆ. ಚಾಸಾ 1 ರವರು ಯಾವ ಸ್ಥಳದಿಂದ ನನಗೆ ಕರೆ ಮಾಡಿದ್ದರು ಎಂದು ನನಗೆ ಗೊತ್ತಿರುವುದಿಲ್ಲ.

ಪಂಚರುಗಳನ್ನು ಚಾಸಾ 1 ರವರೇ ಕರಸಿರುತ್ತಾರೆ. ಕೃತ್ಯ ನಡೆದಿದೆ ಎನ್ನಲಾದ ಸ್ಥಳಕ್ಕೆ ನಾವು ಖಾಸಗಿ ವಾಹನದಲ್ಲಿ ಹೋಗಿದ್ದು ಚಾಸಾ 1 ಹಾಗೂ 4 ರವರು ಸರ್ಕಾರಿ ವಾಹನದಲ್ಲಿ ಹೋಗಿದ್ದರು. ಸದರಿ ಖಾಸಗಿ ವಾಹನ ಯಾರದ್ದು ಎಂದು ನನಗೆ ನಿಖರವಾಗಿ ಹೇಳಲಾಗುವುದಿಲ್ಲ ಎಂದರೆ ಸರಿ.

ಜಯಪುರ ಬಸ್ ನಿಲ್ದಾಣದಿಂದ ಡಿಲೈಟ್ ಪುಲ್ ಹೋಮ್ ಸ್ಟೇ ಗೆ ಸುಮಾರು ಒಂದು ಕಿಮಿ ಅಂತರ ಇರುತ್ತದೆ.

ಕೃತ್ಯ ನಡೆದಿದೆ ಎನ್ನಲಾದ ಸ್ಥಳಕ್ಕೆ ನಾವು ಹೋದಾಗ ಸದರಿ ಡಿಲೈಟ್ ಪುಲ್ ಹೋಮ್ ಸ್ಟೇ ಹೊರಗೆ 4 ವಾಹನಗಳು ನಿಂತಿದ್ದವು. ಡಿಲೈಟ್ ಪುಲ್ ಹೋಮ್ ಸ್ಟೇ ಒಳಗೆ ನಾವು ಹೋದಾಗ ಆರೋಪಿತರು ಓಡಿಹೋಗಲು ಪ್ರಯತ್ನಿಸಿರುತ್ತಾರೆ, ಸದರಿ ಕೊಠಡಿಗೆ ಒಂದೆ ಬಾಗಿಲು ಇದ್ದಿದ್ದರಿಂದ ಅವರು ಓಡಿಹೋಗಲು ಸಾಧ್ಯವಾಗಿರುವುದಿಲ್ಲ. ಸದರಿ ಕಟ್ಟಡವು ಎರಡು ಅಂತಸ್ತಿನ ಕಟ್ಟಡವಾಗಿರುತ್ತದೆ.

ಇಸ್ಪೀಟ್ ಅನ್ನು ಹಿಡಿದುಕೊಂಡಿದ್ದರು ಎನ್ನಲಾದ ವ್ಯಕ್ತಿ ಈ ದಿನ ನ್ಯಾಯಾಲಯದ ಮುಂದಿರುತ್ತಾರೆಯೇ ಎಂದರೆ ಸಾಕ್ಷಿ ನೋಡಿ ಆರೋಪಿ 33 ರವರನ್ನು ನೋಡಿ ಇವರೆ ರಾಜು ಎಂದು ನುಡಿಯುತ್ತಾರೆ.

ಪ್ರಕರಣದ ಒಟ್ಟು 35 ಜನ ಆರೋಪಿತರ ಹೆಸರು ಹಾಗೂ ವಿಳಾಸಗಳನ್ನು ನನಗೆ ಹೇಳಲಾಗುವುದಿಲ್ಲ ಎಂದರೆ ಮರೆತುಹೋಗಿದೆ ಎನ್ನುತ್ತಾರೆ. ಸದರಿ 35 ಆರೋಪಿತರ ಮುಖವನ್ನು ಗುರುತಿಸಲು ನನಗೆ ಸಾಧ್ಯವಾಗಿರುತ್ತದೆಯೇ ಎಂದರೆ 3 ವರ್ಷವಾಗಿರುವುದರಿಂದ ಮರೆತುಹೋಗಿರುತ್ತದೆ ಎನ್ನುತ್ತಾರೆ.

ರೂ.5,54,140/- ಹಣವನ್ನು ನಾನು ಎಣಿಸಿರುವುದಿಲ್ಲ, ಯಾರು ಎಣಿಸಿರುತ್ತಾರೆ ಎಂದು ನನಗೆ ನೆನಪಿರುವುದಿಲ್ಲ. ಸದರಿ ರೂ.5,54,140/-ರ ಹಣದಲ್ಲಿ ಮುಖಬೆಲೆಯನ್ನು ಹೇಳಲಾಗುತ್ತದೆಯೇ ಎಂದರೆ ಸಾಕ್ಷಿಯು ರೂ.500 ರ ಮುಖಬೆಲೆಯ 1086 ನೋಟುಗಳು, 200 ರ ಮುಖಬೆಲೆಯ 16 ನೋಟುಗಳು , 100 ರ ಮುಖಬೆಲೆಯ 66 ನೋಟುಗಳು , 50 ರ ಮುಖ ಬೆಲೆಯ 12 ನೋಟುಗಳು , 10 ರ ಮುಖಬೆಲೆಯ 32 ನೋಟುಗಳು , 20 ರ

ಮುಖ ಬೆಲೆಯ 21 ನೋಟುಗಳು ಇದ್ದವು ಎಂದು ನುಡಿಯುತ್ತಾರೆ. ನಾನು ನುಡಿದಂತೆ ಅಷ್ಟು ಮುಖಬೆಲೆಯ ನೋಟುಗಳು ಇರಲಿಲ್ಲ ಎಂದರೆ ಸರಿಯಲ್ಲ.

ಇಸ್ಪೀಟ್ ಎಲೆಗಳನ್ನು ಯಾರು ಎಣಿಕೆ ಮಾಡಿದ್ದರು ಎಂದು ನನಗೆ ನೆನಪಿರುವುದಿಲ್ಲ. ಕೃತ್ಯ ನಡೆದಿದೆ ಎನ್ನಲಾದ ಸ್ಥಳದಲ್ಲಿದ್ದ 3 ಟೇಬಲ್ ಗಳಲ್ಲಿ 34 ಜನ ಕುಳಿತಿದ್ದು, ಒಬ್ಬರು ನಿಂತಿದ್ದರು.

ನಿಪಿ.1 ರ ಮಹಜರಿನಲ್ಲಿ ಸದರಿ ನೋಟುಗಳ ಸಂಖ್ಯೆಯನ್ನು ನಮೂದು ಮಾಡಿರುವುದಿಲ್ಲ. ಕೊಠಡಿ ಸಂಖ್ಯೆ ಒಂದು ಎಂಬುದಕ್ಕೆ ಸಂಬಂಧಿಸಿ ಸದರಿ ಕೊಠಡಿಯ ಮುಂದೆ ಸಂಖ್ಯಾಫಲಕ ಇರುತ್ತದೆಯೆ ಎಂದರೆ ನೆನಪಿರುವುದಿಲ್ಲ.

ಅಮಾನತುಪಡಿಸಿಕೊಳ್ಳಲಾಯಿತು ಎನ್ನಲಾದ ವಾಹನಗಳು ಯಾರದ್ದು ಎಂದು ಗೊತ್ತಿರುವುದಿಲ್ಲ ಎಂದರೆ ನನಗೆ ನೆನಪಿರುವುದಿಲ್ಲ ಎನ್ನುತ್ತಾರೆ. 39 ಮೊಬೈಲ್ ಗಳು ಯಾರು ಯಾರಿಗೆ ಸೇರಿದ್ದು ಎಂದು ನನಗೆ ಹೇಳಲಾಗುವುದಿಲ್ಲ ಎಂದರೆ ನನಗೆ ಈಗ ನೆನಪಿರುವುದಿಲ್ಲ.

ಕಾರು ಹಾಗೂ ಮೊಬೈಲ್ ಅನ್ನು ಪಣವಾಗಿಟ್ಟು ಜೂಜಾಟ ಆಡುತ್ತಿರುವ ಬಗ್ಗೆ ಮಾಹಿತಿಯನ್ನು ನಿಮಗೆ ಯಾರು ನೀಡಿರುತ್ತಾರೆ ಎಂದರೆ ಚಾಸಾ 1 ರವರು ನೀಡಿರುತ್ತಾರೆ ಎನ್ನುತ್ತಾರೆ.

ಪ್ಲಾಸ್ಟಿಕ್ ಬಾಕ್ಸ್ ಸಮೇತ ಹಣವನ್ನು ಹಾಕಲಾಗಿತ್ತು ಎಂದು ನಾನು ನುಡಿದಿದ್ದು ಸದರಿ ಬಾಕ್ಸ್ ಸ್ಥಳದಲ್ಲೇ ಇತ್ತು, ಸದರಿ ಪ್ಲಾಸ್ಟಿಕ್ ಬಾಕ್ಸನ್ನು ಬಿಳಿ ಬಟ್ಟೆಯಿಂದ ಸುತ್ತಿ ಸೀಲ್ ಮಾಡಲಾಗಿತ್ತು. ಸದರಿ ಬಿಳಿ ಬಟ್ಟೆಯನ್ನು ನಾನೇ ತೆಗೆದುಕೊಂಡು ಹೋಗಿರುತ್ತೇನೆ. ಯಾವ ಇಲಾಖಾ ಮೊಹರನ್ನು ಹಾಕಲಾಗಿತ್ತು ಎಂದರೆ ನನಗೆ ನೆನಪಿರುವುದಿಲ್ಲ. ನಿಪಿ.1 ಮಹಜರನ್ನು ಚಾಸಾ 10 ರವರು ಬರೆದಿರುತ್ತಾರೆ.

ವಶಕ್ಕೆ ಪಡೆಯಲಾಯಿತು ಎನ್ನಲಾದ ವಾಹನದ ಸಂಖ್ಯೆಯನ್ನು ನೀವು ಹೇಳಲು ಸಾಧ್ಯವೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಕೆಎ-19/ಎಂ ಹೆಚ್ 6628, ಕೆಎ-20/ಎಂ ಎ-3558, ಕೆಎ-35/ ಎನ್ ಮುಂದಿನ ಸಂಖೆ ನೆನಪಿರುವುದಿಲ್ಲ. ಮತ್ತೊಂದು ಕೆಎ-45/ಪಿ

ಸಂಖೆ ಗೊತ್ತಿರುವುದಿಲ್ಲ ರಿಡ್ಜ್ ಕಾರಾಗಿರುತ್ತದೆ.

ವಶಕ್ಕೆ ಪಡೆಯಲಾಯಿತು ಎನ್ನಲಾದ 39 ಮೊಬೈಲ್ ಗಳು ಯಾವ ಕಂಪನಿಯದ್ದು ಎಂದರೆ ಮಹಜರ್ ನಲ್ಲಿ ನಮೂದಾಗಿದ್ದು ಸ್ಯಾಮ್ ಸಂಗ್ , ರೆಡ್ ಮಿ , ಒನ್ ಪ್ಲಸ್ , ವಿವೊ, ಎಲ್ ಜಿ, ನೋಕಿಯೋ ಕಂಪನಿಯದ್ದಾಗಿರುತ್ತವೆ. ಸದರಿ ಕಂಪನಿಯ ಎಷ್ಟೆಷ್ಟು ಮೊಬೈಲ್ ಗಳನ್ನು ಅಮಾನತುಪಡಿಸಿಕೊಳ್ಳಲಾಯಿತು ಎಂದರೆ 10 ಕಿ ಪ್ಯಾಡ್ ಗಳು, ಉಳಿದ 29 ಆಂಡ್ರಾಯ್ಡ್ ಆಗಿದ್ದವು. ನಾನು ನುಡಿದಂತೆ ನಿಪಿ.1 ರಲ್ಲಿ ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ.

ಕೊಠಡಿಯು ಎಷ್ಟು ಉದ್ದ ಹಾಗೂ ಅಗಲ ಇತ್ತು ಎಂದರೆ 30X 28 ಅಡಿ ವಿಸ್ತೀರ್ಣ ಇತ್ತು. ಸದರಿ ಕೊಠಡಿಯ ಅಳತೆಯನ್ನು ಚಾಸಾ 6 ರವರು ಮಾಡಿರುತ್ತಾರೆ.

ಫೋಟೋವನ್ನು ಚಾಸಾ 9 ರವರು ಮೊಬೈಲ್ ಮೂಲಕ ತೆಗೆದಿರುತ್ತಾರೆ. ಸದರಿ ಫೋಟೊವನ್ನು ಎಲ್ಲಿ ಪ್ರಿಂಟ್ ಹಾಕಿಸಲಾಯಿತು ಎಂಬ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

ಮಹಜರಿಗೆ ಒಟ್ಟು ಎಷ್ಟು ಜನ ಸಹಿ ಮಾಡಿರುತ್ತಾರೆ ಎಂದು ನನಗೆ ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ ಎಂದರೆ ನನ್ನನ್ನು ಒಳಗೊಂಡು ನಿಪಿ.1 ಕ್ಕೆ 9 ಜನ ಸಹಿ ಮಾಡಿರುತ್ತೇವೆ. ನಿಪಿ.1 ರ ಬಗ್ಗೆ ನನಗೆ ಸ್ಪಷ್ಟ ಮಾಹಿತಿ ಇಲ್ಲದೆ ತಪ್ಪು ಮಾಹಿತಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ, ನಿಪಿ.6 ರ ವರದಿಯನ್ನು ಪೋಲಿಸ್ ಠಾಣೆಯಲ್ಲಿ ಟೈಪ್ ಮಾಡಿಸಲಾಗಿತ್ತು.

ನಾನು ಹೇಳಿದಂತೆ ಕೃತ್ಯ ನಡೆದಿದೆ ಎನ್ನಲಾದ ಸ್ಥಳದಲ್ಲಿ ಯಾವುದೆ ಅಂದರ್ ಬಾಹರ್ ಜೂಜಾಟ ಆಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾವು ಡಿಲೈಟ್ ಪುಲ್ ಹೋಮ್ ಸ್ಟೇ ಗೆ ಹೋಗಿರುವುದಿಲ್ಲ, ಹಾಗೂ ಯಾವುದೆ ದಾಳಿಯಲ್ಲಿ ಭಾಗವಗಿಸಿರುವುದಿಲ್ಲ ಎಂದರೆ ಸರಿಯಲ್ಲ. 35 ಜನ ಆರೋಪಿತರು ಯಾವುದೆ ಅಂದರ್ ಬಾಹರ್ ಆಡುತ್ತಿರಲಿಲ್ಲ, ಪ್ರಕರಣಕ್ಕೂ, ಮುದ್ದೆ ಮಾಲಿಗಳಿಗೂ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

ನಿಪಿ.1 ರ ಮಹಜರನ್ನು ಠಾಣೆಯಲ್ಲಿ ಸೃಷ್ಟಿ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ನಾವು ಮಹಜರ್ ಸಾಕ್ಷಿಗಳನ್ನು ಸ್ಥಳಕ್ಕೆ ಕರೆದುಕೊಂಡು ಹೋಗಿರುವುದಿಲ್ಲ ಹಾಗು ಅವರ ಸಮಕ್ಷಮ ಯಾವುದೆ ದಾಳಿ ನಡೆಸಿರುವುದಿಲ್ಲ ಎಂದರೆ ಸರಿಯಲ್ಲ.

ಚಾಸಾ 1 ನನ್ನ ಮೇಲಾಧಿಕಾರಿಯಾಗಿದ್ದರಿಂದ ಅವರಿಗೆ ಅನುಕೂಲವಾಗಲಿ ಎಂದು ಇಲಾಖೆಯ ಅಂಕಿ ಅಂಶಕ್ಕಾಗಿ ಸುಳ್ಳು ಕೇಸು ದಾಖಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಗೂ ಹಾಗೂ ಮುದ್ದೆ ಮಾಲಿಗೂ ಯಾವುದೆ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

ಚಾಸಾ 1 ನನ್ನ ಮೇಲಾಧಿಕಾರಿಯಾಗಿದ್ದರಿಂದ ಅವರಿಗೆ ಸಹಾಯವಾಗಲಿ ಎಂದು ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಉಳಿದ ಆರೋಪಿಗಳ ಪರಃ ಶ್ರೀ ಎಂ ಹೆಚ್ ಎಸ್ ಕೆ., , ಎಂಎಸ್ ಎನ್., ಹಾಗೂ ಬಿಎಸ್ ಎನ್., ವಕೀಲರಿಂದಃ

(ಸದರಿ ಪಾಟೀ ಸವಾಲನ್ನೆ ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ.)

ಮರುವಿಚಾರಣೆ ಃ ಇಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಓ.

ಸಹಿ/-
(ನಂದಿನಿ ಎಂ ಎನ್)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಃ ಕೊಪ್ಪ.

ಸಾಕ್ಷಿಯ ಸಹಿಃ